ಮಲವಿಸರ್ಜನಾ ಪದ್ಧತಿಯನ್ನು ತೊಡೆದುಹಾಕುವ ನಿಟ್ಟಿನಲ್ಲಿ ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವು ಜಾರಿಯಲ್ಲಿದ್ದು ರಾಜ್ಯದ ಎಲ್ಲ ಗ್ರಾಮೀಣ ಕುಟುಂಬಗಳೂ ಶೌಚಾಲಯ ಹೊಂದುವ ಮೂಲಕ ಬರಲು ಮಲ ವಿಸರ್ಜನೆಯನ್ನು ಮುಕ್ತಗೊಳಿಸಲು ಉದ್ದೇಶಿಸಿ ಅನುಷ್ಠಾನಗೊಳುತ್ತಿದೆ. ನಾಲ್ಕು ವರ್ಷಗಳ (2005–09) ಕಾಲಮಿತಿಯ ಈ ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಯೋಜನೆಯಾಗಿದ್ದು ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಠಾನಗೊಳ್ಳುತ್ತಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲಾ ರೂ. 1,200/– ಪ್ರೋತ್ಸಾಹ ಧನ ನೀಡಲಾಗುತ್ತಿದೆ.

ಈ) ಇಲ್ಲ

151 (237) ಶ್ರೀ ಸಿದ್ದುಸಾವದಿ (ಜಮಖಂಡಿ) : ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ಜಮಖಂಡಿ ತಾಲ್ಲೂಕಿನಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕೈಗೊಂಡ ಕಾರ್ಯಕ್ರಮಗಳೇನು ;

ಆ) ದಿನಾಂಕ: 01–04–2003 ರಿಂದ ಜಮಖಂಡಿ ತಾಲ್ಲೂಕಿನ ಮೀನುಗಾರಿಕೆಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ (ವಿವರ ನೀಡುವುದು) ;

ಇ) ಜಮಖಂಡಿ ತಾಲ್ಲೂಕಿನ ವರ್ಷವಾರು ಮೀನುಗಳ ಇಳುವರಿಯೆಷ್ಟು ;

ಈ) ಇತ್ತೀಚೆಗಿನ ದಿನಂಪ್ರತಿ ಇಳುವರಿಯೆಷ್ಟು ; ಯಾವ ಜಾತಿ ಮೀನುಗಳನ್ನು ಬೇಸಾಯ ಮಾಡಲಾಗುವುದು ;

ಉ) ಮೀನುಗಳ ಮಾರಾಟಕ್ಕಾಗಿ ಸೌಕರ್ಯವನ್ನು ಒದಗಿಸಲಾಗಿದೆಯೇ ;

ಊ) ಜಮಖಂಡಿಯಲ್ಲಿಯ ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶಿಥಲೀಕರಣ ಘಟಕಗಳನ್ನು ಯಾವಾಗ ಪೂರೈಸಲಾಗುವುದು ?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು):

ಅ) ಜಮಖಂಡಿ ತಾಲ್ಲೂಕಿನಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕೆರೆ ಮತ್ತು ನದಿ ಭಾಗಗಳ ಮೀನು ಪಾಶುವಾರು ಹಕ್ಕನ್ನು ವಿಲೇವಾರಿ ಮಾಡುವುದು ಮತ್ತು ಬಿತ್ತನೆ ಮೀನು ಮರಿ ಸರಬರಾಜು.

2. ಮತ್ಸ್ಯ ಆಶ್ರಯ ಯೋಜನೆಯಡಿ ವಸತಿ ರಹಿತ ಬಡ ಮೀನುಗಾರರಿಗೆ ಮನೆ ನಿರ್ಮಾಣಕ್ಕೆ ಸಹಾಯ

3. ಮೀನುಗಾರರ ಸಹಕಾರ ಸಂಘಗಳಿಗೆ ವ್ಯಸ್ಥಾಪನಾ ಸಹಾಯ ಧನ ಹಾಗೂ ಹೂಡಿಕೆಗಾಗಿ ಸಹಾಯ

4. ಮೀನು ಮಾರಾಟಕ್ಕಾಗಿ ಮೀನುಗಾರಿಕೆ ಅಗತ್ಯ ವಸ್ತುಗಳ ಖರೀದಿಗಾಗಿ ಸಹಾಯ

5. ಮತ್ಸ್ಯಮಹಿಳಾ ಸ್ವಾವಲಂಬನೆ ಯೋಜನೆಯಡಿ ಮೀನುಗಾರ ಮಹಿಳೆಯರಿಗೆ ಆವರ್ತಕ ನಿಧಿ ನೀಡುವುದು.

ಆ) 2003–04ನೇ ಸಾಲಿಗೆ ಮತ್ಸ್ಯಾಶ್ರಯ ಯೋಜನೆಯಡಿ 10 ಮನೆಗಳನ್ನು ರಾಜೀವ್‌ಗಾಂಧಿ ಮೀನುಗಾರಿಕೆ ಸಹಕಾರ ಸಂಘ (ನಿ) ಜಮಖಂಡಿ ಇದರ 10 ಸದಸ್ಯರಿಗೆ ಮಂಜೂರು ಮಾಡಲಾಗಿದೆ.

2004–05ನೇ ಸಾಲಿನಲ್ಲಿ ಕೆರೆಗಳನ್ನು ಮೀನುಗಾರಿಕೆಗೆ ಒದಗಿಸಲಾಗಿದೆ.

2005–06ನೇ ಸಾಲಿನಲ್ಲಿ ಈ ಕೆಳಗಿನ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

1. ಸಹಕಾರ ಸಂಘದ ಕಾರ್ಯದರ್ಶಿಗಳಿಗೆ ವ್ಯವಸ್ಥಾಪನ ಸಹಾಯನದ ಯೋಜನೆಯಡಿ ಬಿ.ಕೆ. ಜಂಬಗಿ ಮೀನುಗಾರಿಕೆ ಸಹಕಾರ ಸಂಘ ಕಾರ್ಯದರ್ಶಿಗೆ ರೂ.4000/– ವ್ಯವಸ್ಥಾಪನ ಸಹಾಯದನ ನೀಡಲಾಗಿದೆ.

2. ಮೀನುಗಾರಿಕೆ ಸಹಕಾರ ಸಂಘಗಳಿಗೆ ಹೂಡಿಕೆ ಯೋಜನೆಯಡಿ ಬಿ.ಕೆ. ಜಂಬಗಿ ಮೀನುಗಾರಿಕೆ ಸಹಕಾರ ಸಂಘ ಜಮಖಂಡಿ ಇವರಿಗೆ ರೂ. 10,000/– ಹೂಡಿಕೆ ಮಂಜೂರು ಮಾಡಲಾಗಿದೆ.

2006–07ನೇ ಸಾಲಿನಲ್ಲಿ ಡಿಸೆಂಬರ್ 2006ರ ತಿಂಗಳ ಅಂತ್ಯದವರೆಗೆ ಈ ಕೆಳಗಿನ ಯೋಜನೆಗಳಲ್ಲಿ ಪ್ರಯೋಜನ ಕಲ್ಪಿಸಲಾಗಿದೆ.

1. ರೂ. 3000 ಘಟಕ ವೆಚ್ಚದಲ್ಲಿ ಮೀನುಗಾರರಿಗೆ ಮೀನುಬಲೆ ಖರೀದಿಸಲು ಶೇ.33 1/3ರಷ್ಟು ಸಹಾಯಧನ ಯೋಜನೆಯಡಿ 10 ಫಲಾನುಭವಿಗಳಿಗೆ ತಲಾ ರೂ. 1,000/– ರಂತೆ ರೂ. 10000/– ಸಹಾಯಧನ ಒದಗಿಸಲಾಗಿದೆ.

2. ಮೀನು ವ್ಯಾಪಾರಕ್ಕಾಗಿ ಸೈಕಲ್ ಮತ್ತು ಐಸ್ ಬಾಕ್ಸ್ ಖರೀದಿಸಲು ಶೇ. 50 ರಷ್ಟು ಸಹಾಯಧನ ಯೋಜನೆಯಡಿ 11 ಫಲಾನುಭವಿಗಳಿಗೆ ತಲಾ 1250/– ರಂತೆ ರೂ. 13,750/– ಸಹಾಯಧನ ಒದಗಿಸಲಾಗಿದೆ.

3. ಮತ್ಸ್ಯ ಮಹಿಳಾ ಸ್ವಾವಲಂಬನಾ ಯೋಜನೆಯಡಿ ಮೀನುಗಾರ ಮಹಿಳೆಯರಿಗೆ ಮೀನು ವ್ಯಾಪಾರಕ್ಕಾಗಿ ಸಹಕಾರ ಸಂಘಗಳಿಗೆ ಅವರ್ತಕ ನಿಧಿ ಯೋಜನೆಯಡಿ 3 ಸಹಕಾರ ಸಂಘದ ಮಹಿಳಾ ಮೀನುಗಾರರಿಗೆ ರೂ. 40,000/– ಆವರ್ತಕ ನಿಧಿ ಮಂಜೂರು ಮಾಡಲಾಗಿದೆ.

4. ಮತ್ಸ್ಯಾಶ್ರಯ ಯೋಜನೆಯಡಿ ಮೀನುಗಾರರಿಗೆ ತಲಾ ರೂ. 10,000 ವೆಚ್ಚದಲ್ಲಿ ಮನೆ ನಿರ್ಮಾಣ ಯೋಜನೆಯಡಿ ತಾಲ್ಲೂಕಿನ 10 ಮೀನುಗಾರರಿಗೆ ಮನೆ ಮಂಜೂರು ಮಾಡಲಾಗಿದೆ. ಫಲಾನುಭವಿಗಳ ಆಯ್ಕೆಪ್ರಕ್ರಿಯೆ ನಡೆದಿದೆ.

ಇ) ಜಮಖಂಡಿ ತಾಲ್ಲೂಕಿನ ವರ್ಷವಾರು ಮೀನುಹಿಡುವಳಿ ಈ ಕೆಳಕಂಡಂತಿದೆ.

2003–04 – 60 ಟನ್

2004–05 – 80 ಟನ್

2005–06 – 140 ಟನ್

2006–07 – ಸುಮಾರು 150 ಟನ್ ಮೀನು ಹಿಡುವಳಿ ಆಗುವ ನಿರೀಕ್ಷೆ ಇದೆ.

ಈ) 2005–06 ಮತ್ತು 2006–07ನೇ ಸಾಲಿನಲ್ಲಿ ಕೆರೆಗಳಲ್ಲಿ ಹೆಚ್ಚಿನ ಮೀನುಮರಿ ಬಿತ್ತನೆ ಮಾಡಿರುವುದರಿಂದ ಕೆರೆಗಳಿಂದ ಮತ್ತು ನದಿ ಜಲಾಶಯಗಳಿಂದ ದಿನಂಪ್ರತಿ ಸರಾಸರಿ 200 ಕಿ.ಗ್ರಾಂ. ಮೀನು ಹಿಡುವಳಿ ಮಾಡಲಾಗುತ್ತಿದೆ. ಬೇಸಿಗೆ ಕಾಲದಲ್ಲಿ ದಿನಂಪ್ರತಿ 400–500 ಕಿ.ಗ್ರಾಂ. ಮೀನು ಹಿಡುವಳಿ ಆಗುವ ನಿರೀಕ್ಷೆ ಇದೆ. ಕಟ್ಲಾ, ರೋಹು, ಮೃಗಾಲ್ ಮತ್ತು ಸಾ.ಗೆಂಡೆ ಜಾತಿಯ ಮೀನುಮರಿಗಳನ್ನು ಬೇಸಾಯ ಮಾಡಲಾಗುತ್ತಿದೆ.

ಊ) ಪುರಸಭೆ ಜಮಖಂಡಿ ಇವರು ಮೀನು ಮಾರಾಟಕ್ಕಾಗಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದ್ದಾರೆ.

ಋ) ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶೀಥಲೀಕರಣ ಘಟಕಗಳನ್ನು ಅನುದಾನದ ಲಭ್ಯತೆ ಮೆರೆಗೆ ಆದ್ಯತೆಯನುಗುಣವಾಗಿ ಪರಿಶೀಲಿಸಿ ಪೂರೈಸಲಾಗುವುದು.

152 (238) ಶ್ರೀ ಸಿದ್ದುಸಾವದಿ (ಜಮಖಂಡಿ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ) ರಾಜ್ಯದಲ್ಲಿ ಯಾವ ಯಾವ ಕಾರ್ಡುಗಳಿಗೆ ಎಷ್ಟೆಷ್ಟು ಸೀಮೆಎಣ್ಣೆಯನ್ನು ಪೂರೈಸಲಾಗುವುದು ;

ಆ) ಸೀಮೆಎಣ್ಣೆ ಪೂರೈಸಲಾದ ಕಾರ್ಡುಗಳ ಸಂಖ್ಯೆಗಳೆಷ್ಟು ; ಅನಿಲಯುಕ್ತ ಕಾರ್ಡುಗಳಿಗೆ ಎಣ್ಣೆಯನ್ನು ಪೂರೈಸದಿರುವುದು ಸರ್ಕಾರಕ್ಕೆ ತಿಳಿದಿದೆಯೇ ;

ಇ) ಹಾಗಿದ್ದಲ್ಲಿ, ವಿದ್ಯುತ್ ಇಲ್ಲದಿದ್ದಾಗ ದೀಪ ಬೆಳಗಿಸಲಾದರೂ ಸೀಮೆಎಣ್ಣೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದೇ ;

ಈ) ಇಲ್ಲವಾದ್ದಲ್ಲಿ, ಮುಕ್ತ ಮಾರುಕಟ್ಟೆಯಲ್ಲಾದರೂ ಸೀಮೆಎಣ್ಣೆ ಸಿಗುವಂತೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

ಉ) ಬಡವರಿಗಾಗಿ ಬಂದ ಹೆಚ್ಚಿನ ಸೀಮೆಎಣ್ಣೆ ಕಾಳ ಸಂತೆಯಲ್ಲಿ ಮಾರಾಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಬಂದಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ರಾಜ್ಯದಲ್ಲಿ ಅನಿಲ ರಹಿತ ಬಿಪಿಎಲ್ ಹಾಗೂ ಎಪಿಎಲ್ ಪಡಿತರ ಚೀಟಿದಾರರಿಗೆ ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಮಾಹೆಯಾನ 7 ಲೀಟರ್, ಪಟ್ಟಣ ಪ್ರದೇಶದಲ್ಲಿ–5 ಲೀಟರ್ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 4 ಲೀಟರ್‌ನಂತೆ ಪೈರೈಸಲಾಗುತ್ತಿದೆ.

ಆ) ಅನಿಲ ರಹಿತ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿದಾರರುಗಳಿಗೆ ಸೀಮೆಎಣ್ಣೆಯನ್ನು ಪೂರೈಸಲಾಗುತ್ತಿದೆ. ಪ್ರದೇಶವಾರು ಕಾರ್ಡುಗಳ ಸಂಖ್ಯೆ ಈ ಕೆಳಕಂಡಂತಿದೆ :